ಪರಿಗಣಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಕಾರ್ಪೊರೇಷನ್ ಮಾಡಿ ಸರ್ಕಾರ ಒಂದು ತೀರ್ಮಾನ ತೆಗೆದು ಕೊಂಡರೆ ಇವೆಲ್ಲಾ ತೊಂದರೆ ತಪ್ಪುತ್ತದೆ. ಹಾಗೆ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಮಂತ್ರಿ ಕೇಂದ್ರ ಸರ್ಕಾರಕ್ಕೆ ಬರೆಯುತ್ತೇನೆಂದು ಹೇಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ತಾವು ಸ್ಪೆಲಿಂಗ್ ಮೇಲೆ ತೀರ್ಮಾನ ಮಾಡುವುದಾದರೆ ಬಡಳ ತೊಂದರೆಯಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ನಾನು ಮಂತ್ರಿ ಅದನ್ನೇ ಹೇಳಬೇಕಾಗುತ್ತದೆ. ಈ ವಿಚಾರ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ನಾವು ಈಗಾಗಲೇ ಈ ಸಿನಾನಿಮಸ್ ಬಗ್ಗೆ ಬರೆದಿದ್ದೇವೆ. ಇನ್ನೊಂದು ಕಾಗದ ಬರೆಯುತ್ತೇನೆ. ತಮಗೆ ಇದರ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ ಎಂದು ಹೇಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್. —ಈ ಬಗ್ಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಬರುವ ತನಕ ಸಿ ಆರ್ ಎಸ್ ಸೆಲ್‌ಗೆ ಏನು ಒಪ್ಪಿಸಿದ್ದೀರಿ ಅದನ್ನು ಅಲ್ಲಿಯವರೆಗೆ, ಯಾರಿಗೂ ಏನೂ ತೊಂದರೆಯಾಗದಂತೆ ನೋಡಿಕೊಳ್ಳುವ ಹಾಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ನಾನು ಮೊದಲೇ ಹೇಳಿದ ಹಾಗೆ ಈ ಸಿನಾನಿಮಸ್ ಬಗ್ಗೆ ಕಾರ್ಪೊಫೈ ಮಾಡುವುದಕ್ಕೆ ಈಗಾಗಲೇ ಕಾಗದ ಬರೆದಿದ್ದೇವೆ. ಮತ್ತು ಈಗ ಇವರಿಗೆ ೩ ಪರ್ಸೆಂಟ್ ರಿಸರ್ವೇಷನ್ ಏನು ಇದೆ ಇದನ್ನೂ ಜಾಸ್ತಿ ಮಾಡಬೇಕೆಂತಲೂ ಕೂಡ ಬರೆದಿದ್ದೇವೆ. ಮಂತ್ರಿಮೈಯೂ ಸಹ ಕಾಗದ ಬರೆಯುತ್ತೇವೆ. ಮತ್ತು ನಾನು ಡೆಲ್ಲಿಗೆ ಹೋದಾಗ ಅವರನ್ನು ಕಂಡು ಈ ಬಗ್ಗೆ ವಿಚಾರವಿನಿಮಯ ನಡೆಸುತ್ತೇನೆ, ನಾನು ಈಗ ಮತ್ತೊಮ್ಮೆ ಕಾಗದ ಬರೆಯುತ್ತೇನೆ.

ನಿಯಮ ೩೩೪ರ ಮೇರೆಗೆ

(೧) ಜಮಖಂಡಿ ತಾಲ್ಲೂಕಿನ ರಬಕವಿ–ಬನಹಟ್ಟಿ, ತೇರದಾಳ ನಗರಗಳ ಮಧ್ಯೆ ಸಾರಿಗೆ ಬಸ್ಸುಗಳನ್ನು ಓಡಿಸುವುದು

ಶ್ರೀ ಎಂ ಎಸ್. ಪಾಟೀಲ್.—(ಗೈರು ಹಾಜರಿ ಆಗಿದ್ದಾರೆ)

ಶ್ರೀ ಜೆ. ಎಸ್. ಬಾಲಕೋಟೆ(ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕಿನ ರಬಕವಿ—ಬನಹಟ್ಟಿ, ತೇರದಾಳ, ಮತ್ತು ಹೋಳ ತಾಲ್ಲೂಕಿನ ಮಹಲಿಂಗಪುರ ಔದ್ಯಮಿಕ ನಗರಗಳು, ಆದ್ದರಿಂದ ದಿನಾಲು ಸಾವಿರಾರು ಜನರು ಈ ಗ್ರಾಮಗಳ ಮಧ್ಯೆ ಪ್ರಯಾಸ ಮಾಡುತ್ತಾರೆ. ಈ ಅಯಲ್ಲೀ ಕಡೆ ಇಲ್ಲಿ ಓಡಾಡುತ್ತಿದ್ದ ಖಾಸಗೀ ವಾಹನಗಳು ಸರಕಾರ ಕಾನೂನು ಕ್ರಮ ತೆಗೆದುಕೊಂಡಿದ್ದರಿಂದ ಬಂದಾಗಿವೆ.

ಇದರಿಂದಾಗಿ ಈ ಭಾಗದ ಜನರಿಗೆ ಪ್ರಯಾಸ ಮಾಡಲು ತುಂಬ ತೊಂದರೆ ಆಗಿದೆ. ಆದ್ದರಿಂದ ಈ ತೊಂದರೆಯನ್ನು ಹೋಗಲಾಡಿಸಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಈ ಭಾಗದಲ್ಲಿ ವಿನಿ ಬಸ್ಸುಗಳನ್ನಾಗಲೀ, ಸಿಟಿ ಬಸ್ಸುಗಳನ್ನಾಗಲೀ ಪ್ರಾರಂಭಿಸಿ ಈ ಭಾಗದ ಜನರ ತೊಂದರೆಯನ್ನು ನಿವಾರಿಸುವುದು ತೀರಾ ಅವಶ್ಯವಾಗಿದೆ.

ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಹೆಚ್ಚಿನ ಬಸ್ಸುಗಳನ್ನು ಈ ಭಾಗದಲ್ಲಿ ಪ್ರಾರಂಭಿಸಲು ಕುರಿತು ಸನ್ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ರಾಜ್ಯಗಳ ಪುನರ್‌ವಿಂಗಡಣಾ ಸಮಯದಲ್ಲಿ ಉತ್ತರದ ನಾಲ್ಕು ಜಿಲ್ಲೆಗಳಾದ ಬೆಳಗಾವಿ, ಧಾರವಾಡ ಉತ್ತರ ಕನ್ನಡ ಮತ್ತು ಬಿಜಾಪುರ ಜಿಲ್ಲೆಗಳು ಕರ್ನಾಟಕ ರಾಜ್ಯಕ್ಕೆ, ವರ್ಗಾವಣೆ ಗೊಂಡವು. ಈ ರಾಜ್ಯಗಳ ಪುನರ್‌ವಿಂಗಡಣೆಗೆ ಮುಂಚಿತವಾಗಿಯೇ ಈ ಜಿಲ್ಲೆಗಳಲ್ಲಿ ಪ್ರಯಾಣಿಕರ ರಸ್ತೆ ಸಾರಿಗೆಯು ಆಗಿನ ಮುಂಬೈ ಸರ್ಕಾರದವರಿಂದ ರಾಷ್ಟ್ರೀಕರಣವಾಗಿತ್ತು. ಈಚಿನ ದಿನಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣಿಕರ ಬೇಡಿಕೆಗಳಿಗನುಗುಣವಾಗಿ ಸಾರಿಗೆ ಸೇವೆಯನ್ನು ಹೆಚ್ಚಿಸುತ್ತಾ ಬಂದಿದೆ.

ರಬಕವಿ, ಬನಹಟ್ಟಿ, ತೇರದಾಳ ಬಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿಯೂ ಮಹಾಲಿಂಗಪುರ, ಮುಧೋಳ್ ತಾಲ್ಲೂಕಿನಲ್ಲಿಯೂ ಇರುವ ಪ್ರಮುಖ ಪಟ್ಟಣಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಿಕಸಾಮ್ಯಕ್ಕೆ ಒಳಪಟ್ಟಿರುವ ಉತ್ತರ ಕರ್ನಾಟಕದ ಈ ಭಾಗದಲ್ಲಿ ಖಾಸಗೀಯವರ ಕಾರ್ಯಾಚರಣೆಯು ಅನಧಿಕೃತವಾಗಿಯೂ ಅಕ್ರಮವೂ ಆಗಿದೆ. ಈ ವಿಷಯವನ್ನು ಮನಗಂಡು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈ ಪ್ರದೇಶದಲ್ಲಿ ಸಾಕಷ್ಟು ಬಸ್ಸುಗಳನ್ನು ಓಡಿಸುತ್ತಿದ್ದರೂ ಕೆಲವು ಖಾಸಗೀ ವ್ಯಾನುಗಳು ಅನಧಿಕೃತವಾಗಿ ಓಡಾಡುತ್ತಿದ್ದುದರಿಂದ ಬಿಜಾಪುರ ಜಿಲ್ಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ಅನಧಿಕೃತ ಸಾರಿಗೆ ವಾಹನಗಳ ವಿರುದ್ಧ ಬಿಗಿ ಕಾನೂನು ಕ್ರಮ ಕೈಗೊಂಡ ಪರಿಣಾಮವಾಗಿ ಈ ಅನಧಿಕೃತ ಸಾರಿಗೆ ಸ್ಥಗಿತಗೊಂಡಿದೆ.

ಸಕಾರಣವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಪ್ರಯಾಣಿಕರ ವರ್ಗದ ಹಿತ ದೃಷ್ಟಿಯಿಂದ ೧೯೮೬ನೇ ಜುಲೈ ತಿಂಗಳಿನಲ್ಲಿ ನಾಲ್ಕು ವೃತ್ತ ಸಾರಿಗೆಯನ್ನು ಜಮಖಂಡಿಯಿಂದ ರಬಕವಿ, ಮಹಾಲಿಂಗಪುರ ಮತ್ತು ಮುಧೋಳ್ ಮಾರ್ಗವಾಗಿ ಪುನಃ ಜಮಖಂಡಿಗೆ ಬಂದು ಸೇರುವಂತೆ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಪ್ರಾರಂಭಿಸಿತು. ಇದು ನಿತ್ಯವೂ ಪ್ರಾರಂಭವಾಗಿದ್ದು ಈ ಪ್ರದೇಶಕ್ಕೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ. ಸುಮಾರು ಒಂದು ವಾರ ಕಾಲ ಸತತವಾಗಿ ಸಾರಿಗೆ ಬೇಡಿಕೆಯಂಶವನ್ನು ಅಭ್ಯಸಿಸಿದ ನಂತರವೇ ಹೊಸ ಸಾರಿಗೆ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆ. ಈ ಕ್ರಮವು ಅನಧಿಕೃತ ಖಾಸಗೀ ಸಾರಿಗೆ ಸೇವೆಗೆ ಬದಲಾದ ಪರ್ಯಾಯ ವಿಚಾರಣೆಗಿದೆ. ಈ ಅಂಶವನ್ನು ಈ ಕೆಳಗಿನ ವೇಳಾಪಟ್ಟಿಯಲ್ಲಿ ಕಾಣಬಹುದು.

ಸ್ಥಳ	ಖಾಲಿ ಟ್ರಿಪ್ಪ್‌ಗಳ ಸಂಖ್ಯೆ	೧೯೮೬–೮೪ರಲ್ಲಿ ಇದ್ದ ಟ್ರಿಪ್ಪ್‌ಗಳು	ಹೆಚ್ಚಿಸಲ್ಪಟ್ಟ ಟ್ರಿಪ್ಪ್‌ಗಳು
ಜಮಖಂಡಿ	೨೮೩	೨೩೬	೪೭
ರಬಕವಿ	೧೯೮	೧೫೯	೩೯
ಬನಹಟ್ಟಿ	೧೪೧	೧೪೫	೩೬
ತರದಾಳ್	೧೧೦	೭೨	೩೮
ಮಹಾಲಿಂಗಪುರ	೧೯೪	೧೪೮	೪೬
ಮುಧೋಳ್	೨೦೧	೧೫೧	೫೦

ನಿಗಮವು ತನ್ನ ದಿನನಿತ್ಯ ಸಾರಿಗೆ ಸೇವೆಯಲ್ಲಿದೆ. ಸಂತೆದಿನಗಳಲ್ಲಿ ಹೆಚ್ಚಿನ ಬೇಡಿಕೆಯನ್ನು ಪೂರೈಸುವ ಸಲುವಾಗಿ ಸದರೀ ದಿವಸಗಳಂದು ವಿಶೇಷ ಬಸ್ಸುಗಳನ್ನು ಸಹಾ ಓಡಿಸುತ್ತಿದೆ. ಈಗ ನೀಡಲಾಗುತ್ತಿರುವ ಸಾರಿಗೆ ಸೇವೆಯು ಬೇಡಿಕೆಗೆ ಅನುಗುಣವಾಗಿದೆ. ಆದ್ಯಾಗ್ಯೂ ಹೆಚ್ಚಿನ ಬೇಡಿಕೆ ಕಂಡುಬಂದಲ್ಲಿ ಹೆಚ್ಚುವರಿ ಬಸ್ಸನ್ನು ಓಡಿಸಲಾಗುವುದು.

ಜಮಖಂಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೬೫ ಬಸ್ಸುಗಳನ್ನೊಳಗೊಂಡು ಡಿಪೋ ಮತ್ತು ಬಸ್ ಸ್ಟ್ಯಾಂಡ್ ಪಕ್ಕಪಕ್ಕದಲ್ಲಿ ಇರುವುದರಿಂದ ಅವಶ್ಯಕತೆ ಕಂಡುಬಂದಲ್ಲಿ ಹೆಚ್ಚು ಬಸ್ಸುಗಳನ್ನು ಓಡಿಸಲು ಡಿಪೋ ಮ್ಯಾನೇಜರಿಗೆ ಆದೇಶ ನೀಡಲಾಗಿದೆ.

ಜಮಖಂಡಿ, ಬನಹಟ್ಟಿ, ರಬಕವಿ, ತೇರದಾಳ್, ಮಹಾಲಿಂಗಪುರಗಳು ನಗರ ಪ್ರದೇಶಗಳೆಂದು ಪರಿಗಣಿತವಾಗಿಲ್ಲದ್ದರಿಂದ ನಗರ ಸಾರಿಗೆ ಬಸ್ಸುಗಳನ್ನು ಓಡಿಸುವ ಔಚಿತ್ಯ ಕಂಡುಬರುವುದಿಲ್ಲ.

ಆದರೂ ಸಹ ಅವಶ್ಯಕತೆ ಕಂಡುಬಂದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸಿ ಸಾರಿಗೆ ಬೇಡಿಕೆಯನ್ನು ಪೂರೈಸಲಾಗುವುದು.